**ಅಮಲ್ಜಾರಿ ಸಂಖ್ಯೆ** 4/2020 **ಪಿ.ಡಬ್ಲೂಃ** 1

ಸಾಕ್ಷಿಯನ್ನು ದಿಃ **29.11.2022** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ 1 ನೇ ತಕರಾರುದಾರರ ಪರ ಆರ್.ಜಿ.ಪಿ /ವಿ.ಆರ್ ವಕೀಲ**ರಿಂದ**

ನಾನು 6 ನೇ ತರಗತಿ ವರೆಗೂ ವಿದಾಭ್ಯಾಸ ಮಾಡಿದ್ದೇನೆ. ನನ್ನ ಮಗಳು ಎಂ.ಟೆಕ್ ಮಾಡಿದ್ದಾರೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ, ಆಂಗ್ಲ ಭಾಷೆ ಬರುವುದಿಲ್ಲ. ನನ್ನ ಪತಿ ದಿಃ 07.09.2021 ರಲ್ಲಿ ಮರಣ ಹೊಂದಿದ್ದಾರೆ. ತೀರ್ಪುಧಣಿಯ ವಾರಸುದಾರರಾಗಿ ನಾವು ಸಲ್ಲಿಸಿರುವ ಅರ್ಜಿಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ. ನಾನು ಸಕಾಲದಲ್ಲಿ ಅರ್ಜಿ ಸಲ್ಲಿಸಲು ಅಸ್ವಸ್ಥಳಾಗಿದ್ದೆ ಎಂದು ಹೇಳಿದ್ದು, ನನ್ನ ಮಗಳು ಹುಷಾರಾಗಿದ್ದಳು.

ಅದೆ ಪ್ರಕರಣ ಸಂಬಂಧಪಟ್ಟಂತೆ ಅರ್ಜಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಮೇಲ್ಮನವಿ ಸಂಖ್ಯೆ ಆರ್.ಎ ನಂ. 200/2020 ಗೌರವಾನ್ವಿತ 8 ನೇ ಅಪರ ಜಿಲ್ಲಾ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎಂಬ ವಿಚಾರ ನನಗೆ ತಿಳಿದಿದೆ ಎಂದರೆ ಸರಿ. ಸದರಿ ಮೇಲ್ಮನವಿ ನಮ್ಮ ಮತ್ತು ಜೆ.ಡಿ.ಆರ್. ರವರ ನಡುವೆ ತೀರ್ಮಾನವಾಗಿರುವ ಭಾಗಾಂಶದ ದಾವೆಯ ತೀರ್ಪು ಮತ್ತು ಡಿಕ್ರಿ ವಿರುದ್ಧ ಸಲ್ಲಿಸಲಾಗಿದೆ ಎಂದರೆ ಸರಿ. ಮೊದಲಿಗೆ ನನ್ನ ಪತಿ ಅಲ್ಲಿ 21 ನೇ ಎದುರಾಳಿಯಾಗಿದ್ದು, ಅವರ ಮಾರಣಾನಂತರ ನಾನು ಮತ್ತು ನನ್ನ ಮಗಳು ಸದರಿ ಮೇಲ್ಮನವಿಯಲ್ಲಿ ಪಕ್ಷಗಾರರಾಗಿ ಸೇರ್ಪಡೆಗೊಂಡಿದ್ದೇವೆ ಎಂದರೆ ಸರಿ. ನನ್ನ ಮರಣ ಹೊಂದಿದ ಸುಮಾರು 15 ದಿನಗಳಲ್ಲೆ ನಮಗೆ ಮೇಲ್ಮನವಿ ನ್ಯಾಯಾಲಯದಿಂದ ನೊಟೀಸು ಬಂದಿತ್ತು ಎಂದರೆ ಸರಿಯಲ್ಲ, 2–3 ತಿಂಗಳ ನಂತರ ಬಂದಿತ್ತು. ಸದರಿ ಮೇಲ್ಮನವಿಯಲ್ಲಿ ನಮಗೆ ನೊಟೀಸು ಬಂದ ನಂತರ ನಮ್ಮ ಪರ ವಕೀಲರು ಮೇಲ್ಮನವಿಯಲ್ಲಿ ಹಾಜರಾಗಿದ್ದಾರೆ ಎಂದರೆ ಸರಿ. ಅದಾದನಂತರ ನಾವು ಕೂಡ

ಸದರಿ ಮೇಲ್ಮನವಿಯಲ್ಲಿ ಹಾಜರಾಗಿದ್ದೇವೆ ಎಂದರೆ ಸಾಕ್ಷಿ ಸುಮಾರು 3–4 ತಿಂಗಳ ನಂತರ ನಾವು ಹಾಜರಾಗಿದ್ದೇವೆ ಎನ್ನುತ್ತಾರೆ. ದಾವಾ ಆಸ್ತಿಗಳ ಬಗ್ಗೆ ನಾವು ಎಡಿಎಲ್‌ಆರ್ ಕಛೇರಿಗೆ ದಿಃ 06.12.2021 ರಂದು ನಮ್ಮ ತಕರಾರು ಸಹ ಸಲ್ಲಿಸಿದ್ದೇವೆ ಎಂದರೆ ಸರಿ. ಸದರಿ ತಕರಾರಿನಲ್ಲಿ ಈ ಅರ್ಜಿ ನಡೆಯುತ್ತಿರುವ ಬಗ್ಗೆ ಕೂಡ ನಮೂದು ಮಾಡಿದ್ದೇವೆ ಎಂದರೆ ಸರಿ. ಎಡಿಎಲ್‌ಆರ್ ಕಛೇರಿಗೆ ಮೇಲ್ಕಂಡಂತೆ ಸಲ್ಲಿಸಿದ ತಕರಾರು ವೇಳೆ ನಮಗೆ ಈ ಪ್ರಸ್ತುತ ಅರ್ಜಿ ನಡೆಯುತ್ತಿರುವ ವಿಚಾರ ತಿಳಿದಿತ್ತು ಎಂದರೆ ಸರಿ. ಆ ಸಂದರ್ಭದಲ್ಲೆ ಈ ಅರ್ಜಿಯಲ್ಲಿ ಅರ್ಜಿಗಳನ್ನು ಹಾಕಲು ನಮಗೇನು ತೊಂದರೆ ಇರಲಿಲ್ಲ ಎಂದರೆ ಸರಿ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಅರ್ಜಿ ಸಲ್ಲಿಸಲು ಎಷ್ಟು ದಿನಗಳ ಕಾಲ ವಿಳಂಬ ಆಗಿದೆ ಎಂಬುದನ್ನು ನಮೂದು ಮಾಡಿದ್ದೇನೊ ಇಲ್ಲವೊ ಎಂಬುದನ್ನು ಹೇಳಲು ಗೊತ್ತಾಗುವುದಿಲ್ಲ. ನಮ್ಮ ವಕೀಲರು ಕೂಡ ಅರ್ಜಿ ಸಲ್ಲಿಸುವಲ್ಲಿ ಎಷ್ಟು ದಿನ ತಡವಾಗಿದೆ ಎಂದು ನನಗೆ ತಿಳಿಸಿರುವುದಿಲ್ಲ. ನನ್ನ ಪತಿ ಮತ್ತು ಇತರೆಯವರ ನಡುವೆ 16 ವರ್ಷಗಳಿಂದಲೂ ಮೊಕದ್ದಮೆಗಳು ನಡೆಯುತ್ತಿರುವ ವಿಚಾರಗಳು ನನಗೆ ತಿಳಿದಿದೆ. ನನಗೆಲ್ಲಾ ವಿಚಾರಗಳು ತಿಳಿದಿದ್ದರೂ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ 16 ವರ್ಷಗಳಿಂದ ಕೇಸುಗಳು ನಡೆಯುತ್ತಿವೆ ಎಂದು ಕಾಣಿಸಿರುವುದಿಲ್ಲ. ನಾನು ನನ್ನ ಅರ್ಜಿಗಳಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸುಳ್ಳು ಅಂಶಗಳನ್ನು ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಅಂಶಗಳನ್ನು ನಮೂದು ಮಾಡಿರುವ ಕಾರಣ ಅರ್ಜಿಗಳಲ್ಲಿ ಕೋರಿರುವ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ಇದೆ ಸ್ವತ್ತುಗಳ ಬಗ್ಗೆ ಗೌರವಾನ್ವಿತ ಉಚ್ಛ ನ್ಯಾಯಾಲಯದಲ್ಲಿ ಕೂಡ ಪ್ರಕರಣ ನಡೆಯುತ್ತಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸದರಿ ಗೌರವಾನ್ವಿತ ಉಚ್ಛ ನ್ಯಾಯಾಲಯದ ಪ್ರಕರಣ ಬಗ್ಗೆ ಒಂದು ದಾಖಲೆಯನ್ನು ಕೂಡ ಈ ಪ್ರಸ್ತುತ ಅರ್ಜಿಯಲ್ಲಿ ಸಲ್ಲಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾವು ಗೌರವಾನ್ವಿತ ಉಚ್ಛ ನ್ಯಾಯಾಲಯದ ಕೇಸಿನಲ್ಲಿಯೂ ನಮ್ಮಗಳ ಪರ ವಕಾಲತ್ತು ಸಲ್ಲಿಸಲು ಹೋಗಿದ್ದೇವು. ಅರ್ಜಿ ಷೆಡ್ಯೂಲ್ ಮತ್ತು ಇತರೆ ಸ್ವತ್ತುಗಳ ಬಗ್ಗೆ ಗೌರವಾನ್ವಿತ ಉಚ್ಛ ನ್ಯಾಯಾಲಯದಲ್ಲಿ ನಡೆಯುತ್ತಿರುವ ಪ್ರಕರಣದಲ್ಲಿ ತಡೆಯಾಜ್ಞೆ ಇರುವ ವಿಚಾರ ನನಗೆ ತಿಳಿದಿಲ್ಲ. ನನಗೆ ಗೌರವಾನ್ವಿತ ಉಚ್ಛ ನ್ಯಾಯಾಲಯದಲ್ಲಿ

ನಡೆಯುತ್ತಿರುವ ಪ್ರಕರಣ ಅಲ್ಲಿ ತಡೆಯಾಜ್ಞೆ ಇರುವ ವಿಚಾರ ಎಲ್ಲವೂ ತಿಳಿದಿದೆ ಆದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ತಿಳಿದಿದ್ದರೂ ನಾನು ಸುಳ್ಳು ಅರ್ಜಿಗಳನ್ನು ಹಾಕಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**3 ನೇ ಜೆ.ಡಿ.ಆರ್. ಮತ್ತು 2 ನೇ ತಕರಾರುದಾರರ ಪರ ವಕೀಲರುಗಳು ಮೇಲ್ಕಂಡ ಪಾಟೀ ಸವಾಲನ್ನು ಅನುಮೋದಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.**

ಜೆ.ಡಿ.ಆರ್ 2 ರಿಂದ 5 ರವರ ಪರ ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.